# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 528 (614)
ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 09-03-2026
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ, ದಿನಾಂಕ: 01-01-2016 ರಿಂದ 31-12-2025 ರವರೆಗೆ ಖಾಲಿಯಿರುವ ಬೋಧಕ ಹುದ್ದೆಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಮಾಹಿತಿ ನೀಡುವುದು);</td><td>ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆಯಿಂದ ದಿನಾಂಕ: 01-01-2016 ರಿಂದ ದಿನಾಂಕ: 31-12-2025 ರವರೆಗೆ ಖಾಲಿಯಾಗಿರುವ ಬೋಧಕ ಹುದ್ದೆಗಳ ವಿವರ ಈ ಕೆಳಕಂಡಂತ್ತಿರುತ್ತದೆ: (ಅನುಬಂಧ-ಎ ರಲ್ಲಿ ಒದಗಿಸಲಾಗಿದೆ)
<table>
<tr><th>ವರ್ಷ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>2016</td><td>173</td></tr>
<tr><td>2017</td><td>157</td></tr>
<tr><td>2018</td><td>219</td></tr>
<tr><td>2019</td><td>236</td></tr>
<tr><td>2020</td><td>267</td></tr>
<tr><td>2021</td><td>297</td></tr>
<tr><td>2022</td><td>320</td></tr>
<tr><td>2023</td><td>279</td></tr>
<tr><td>2024</td><td>310</td></tr>
<tr><td>2025</td><td>294</td></tr>
<tr><td>ಒಟ್ಟು</td><td>2552</td></tr>
</table></td></tr>
<tr><td>ಆ)</td><td>ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಯಾವ ಶೈಕ್ಷಣಿಕ ವರ್ಷದಿಂದ, ಯಾವ ಶೈಕ್ಷಣಿಕ ವರ್ಷದವರೆಗೆ ಖಾಲಿಯಿರುವ ಬೋಧಕ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡಲಾಗಿದೆ;</td><td rowspan="2">• ದಿನಾಂಕ 31-12-2015 ರವರೆಗೆ ವಿವಿಧ ಕಾರಣಗಳಿಂದ ತೆರವಾದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ನಿಗದಿತ ಕಾರ್ಯಭಾರವಿರುವ ಬೋಧಕ ಹುದ್ದೆಗಳಿಗೆ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಒಟ್ಟು 1033 ಬೋಧಕ ಹುದ್ದೆಗಳನ್ನು ತುಂಬಲು ಅವಕಾಶ ಕಲ್ಪಿಸಲಾಗಿದೆ.<br><br>• ಅಂತೆಯೇ, ದಿನಾಂಕ: 31-12-2015ರ ಪೂರ್ವದಲ್ಲಿ ತೆರವಾಗಿರುವ ಹುದ್ದೆಗಳಲ್ಲಿ ಸರ್ಕಾರದಿಂದ ಭರ್ತಿ ಮಾಡಲು 1033 ಬೋಧಕ ಹುದ್ದೆಗಳಿಗೆ ಅವಕಾಶ ಕಲ್ಪಿಸಿದ್ದು, ಈ ಪೈಕಿ ಒಟ್ಟು 468 ಬೋಧಕ ಹುದ್ದೆಗಳನ್ನು ಭರ್ತಿ</td></tr>
<tr><td>(ಇ)</td><td>ಪ್ರಸ್ತುತ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: 01-01-2016 ರಿಂದ 31-12-2020 ರವರೆಗೆ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿಮಾಡಲು ಅವಕಾಶ</td></tr>
</table>

| | | |
|---|---|---|
| | ನೀಡಲಾಗಿದ್ದು ನೇಮಕಾತಿ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಕುರಿತು ಸರ್ಕಾರದ ನಿಲುವೇನು; ಹಾಗೂ ಈ ಸಮಸ್ಯೆಯನ್ನು ಸರ್ಕಾರ ಯಾವಾಗ ಪರಿಹರಿಸುತ್ತದೆ; | ಮಾಡಲು ಅನುಮತಿ ನೀಡಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಇಪಿ 396 ಎಸ್ ಇ ಎಸ್ 2021 ದಿನಾಂಕ:07-08-2024ರ ಆದೇಶದಲ್ಲಿದಿನಾಂಕ: 01-01-2016 ರಿಂದ 31-12-2020 ರವರೆಗೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ನಿಧನ, ರಾಜೀನಾಮೆ ಮತ್ತು ಇತರೆ ಕಾರಣಗಳಿಂದ ತೆರವಾದ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಆನ್-ಲೈನ್ ಮೂಲಕವೇ ನಡೆಸುವಂತೆ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿ ಹುದ್ದೆ ಭರ್ತಿಗೆ ಏಳು ಷರತ್ತುಗಳನ್ನು ವಿಧಿಸಲಾಗಿದೆ. ಅದರಂತೆ ಹುದ್ದೆ ಭರ್ತಿಗೆ ಕ್ರಮವಹಿಸಬೇಕಾಗಿರುತ್ತದೆ<br>• ಖಾಲಿ ಹುದ್ದೆಗಳ ಮಾಹಿತಿಗಳನ್ನು ಇಂದೀಕರಿಸಲು ಕಾಲಾವಕಾಶವನ್ನು ಕಾಲೇಜುಗಳಿಗೆ ನೀಡಲಾಗಿದೆ. ಜೊತೆಗೆ ಇಂದೀಕರಿಸಿದ ಮಾಹಿತಿಯನ್ನು ಪರಿಶೀಲಿಸಲು ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. ಪ್ರಸ್ತುತ ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕಾಗಿದ್ದು, ಸದರಿ ಅರ್ಜಿಯನ್ನು ಸಹ ತಂತ್ರಾಂಶದಲ್ಲಿ ಇಂದೀಕರಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. |
| (ಈ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಪ್ರತಿ ವಿಭಾಗದಲ್ಲಿ ಅಂದರೆ ಕಲಾ ವಿಭಾಗ, ವಾಣಿಜ್ಯ ವಿಭಾಗ ಹಾಗೂ ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿರಬೇಕು; | • ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)(ಶೈಕ್ಷಣಿಕ, ಆಡಳಿತ, ನೋಂದಣಿ, ಸಹಾಯಾನುದಾನ ಇತ್ಯಾದಿ) 2024ರ ನಿಯಮಗಳ ನಿಯಮ SCHEDULE-IV ರನ್ವಯ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಾರಕ್ಕೆ ಒಬ್ಬ ಉಪನ್ಯಾಸಕರಿಗೆ ಪ್ರಾಯೋಗಿಕ ವಿಷಯಗಳಾದರೆ 24 ಗಂಟೆ ಹಾಗೂ ಪ್ರಾಯೋಗಿಕವಲ್ಲದ ವಿಷಯಗಳಿಗೆ 20 ಗಂಟೆಗಳ ಕಾರ್ಯಭಾರ ಇರಬೇಕಾಗುತ್ತದೆ. ಕಾರ್ಯಭಾರವನ್ನು ಬೋಧನಾ ವಿಷಯಗಳ ಆಧಾರದ ಮೇಲೆ ನಿಗದಿಪಡಿಸಲಾಗುತ್ತಿದೆ.<br>• ಕಲಾ ವಿಭಾಗದ ವಿಷಯಗಳಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಸೇರಿ 320 ವಿದ್ಯಾರ್ಥಿಗಳು ಇರಬೇಕು.<br>• ವಾಣಿಜ್ಯ ವಿಭಾಗದಲ್ಲಿ ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರದ ವಿಷಯಗಳನ್ನು ಒಬ್ಬ ಉಪನ್ಯಾಸಕರೇ ಬೋಧಿಸಬೇಕಾಗಿರುವುದರಿಂದ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಸೇರಿ 160 ವಿದ್ಯಾರ್ಥಿಗಳು, ಹಾಗೂ ವಾಣಿಜ್ಯ |

| | | |
|---|---|---|
| | | ವಿಭಾಗದಲ್ಲಿ ಪ್ರಾಯೋಗಿಕ ವಿಷಯಕ್ಕೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಸೇರಿ 160 ವಿದ್ಯಾರ್ಥಿಗಳು ಮತ್ತು ಪ್ರಾಯೋಗಿಕವಲ್ಲದ ವಿಷಯಗಳಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಸೇರಿ 320 ವಿದ್ಯಾರ್ಥಿಗಳು ಇರಬೇಕು.<br>• ಭಾಷಾ ವಿಷಯಗಳಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಸೇರಿ 320 ವಿದ್ಯಾರ್ಥಿಗಳು ಇರಬೇಕು.<br>• ವಿಜ್ಞಾನ ವಿಭಾಗದ ವಿಷಯಗಳು ಪ್ರಾಯೋಗಿಕ ವಿಷಯಗಳಾದ್ದರಿಂದ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಸೇರಿ 160 ವಿದ್ಯಾರ್ಥಿಗಳು ಇರಬೇಕಾಗುತ್ತದೆ. |
| (ಉ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಭಾಷಾ ವಿಷಯಗಳಾದ ಕನ್ನಡ, ಹಿಂದಿ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಉರ್ದು, ಸಂಸ್ಕೃತ, ಅರೇಬಿಕ್, ಫ್ರೆಂಚ್ ಈ ಭಾಷಾ ವಿಷಯಗಳಿಗೂ ಸಹ ಕನಿಷ್ಠ 40 ಮಂದಿ ವಿದ್ಯಾರ್ಥಿಗಳ ಸಂಖ್ಯೆ ಇರಬೇಕೆಂದು ಷರತ್ತು ವಿಧಿಸಿರುವುದರಿಂದ ಭಾಷಾ ವಿಷಯಗಳ ಹುದ್ದೆಯನ್ನು ಭರ್ತಿ ಮಾಡಲು ಸಮಸ್ಯೆ ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು ಸರ್ಕಾರದ ನಿಲುವೇನು; | • ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)(ಶೈಕ್ಷಣಿಕ, ಆಡಳಿತ, ನೋಂದಣಿ, ಸಹಾಯಾನುದಾನ ಇತ್ಯಾದಿ) 2024ರ ನಿಯಮಗಳ ನಿಯಮ 17ರ SCHEDULE-IVರನ್ವಯ ಭಾಷಾ ವಿಷಯಗಳಾದ ಕನ್ನಡ, ಹಿಂದಿ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಉರ್ದು, ಸಂಸ್ಕೃತ, ಅರೇಬಿಕ್, ಫ್ರೆಂಚ್ ಈ ಭಾಷಾ ವಿಷಯಗಳಿಗೂ ಕನಿಷ್ಠ 40 ವಿದ್ಯಾರ್ಥಿಗಳ ಸಂಖ್ಯಾಬಲ ನಿಗಧಿಪಡಿಸಲಾಗಿರುತ್ತದೆ. ಸದರಿ ಷರತ್ತನ್ನು ಸಡಲಿಸುವ ಸಂಬಂಧ ಪ್ರಸ್ತಾವನೆ ಸ್ವೀಕೃತವಾದಲ್ಲಿ, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |
| (ಊ) | ಪ್ರತಿ ವಿಭಾಗಗಳಾದ (combination) ಕಲಾ ವಿಭಾಗ, ವಾಣಿಜ್ಯ ವಿಭಾಗ ಹಾಗೂ ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 40 ಇರಬೇಕೆಂದಾದರೆ ಪ್ರತಿ ವಿಭಾಗದ (combination) ಭಾಷಾ ವಿಷಯಗಳ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಭಾಷಾ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಭಾಷಾ | • ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)(ಶೈಕ್ಷಣಿಕ, ಆಡಳಿತ, ನೋಂದಣಿ, ಸಹಾಯಾನುದಾನ ಇತ್ಯಾದಿ) 2024ರ ನಿಯಮಗಳ ನಿಯಮ 17ರ SCHEDULE-IVರನ್ವಯ ಭಾಷಾ ವಿಷಯಗಳಿಗೆ ಕನಿಷ್ಠ 40 ವಿದ್ಯಾರ್ಥಿಗಳ ಸಂಖ್ಯಾಬಲ ನಿಗಧಿಪಡಿಸಲಾಗಿರುತ್ತದೆ.<br>• 2024ರ ನಿಯಮದ ನಿಯಮ 27(6)(ಬಿ) ಪ್ರಕಾರ ಪ್ರತಿ ಸಂಯೋಜನೆ/ವಿಭಾಗದಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಸಂಖ್ಯಾಬಲ ಹೊಂದಿರತಕ್ಕದೆಂದು. ನಿಯಮವಿರುತ್ತದೆ. |

| | | |
|---|---|---|
| | ವಿಷಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಟ 40 ಇರಲು ಹೇಗೆ ಸಾಧ್ಯ; ಈ ಹಿಂದಿನ ಆದೇಶದಲ್ಲಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರತಿ ಭಾಷಾ ವಿಷಯಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಠ 10 ಸಂಖ್ಯೆ ಇದ್ದು, ಪ್ರಸ್ತುತ ಇರುವ ಷರತ್ತನ್ನು ಸಡಿಲಿಸಿ ಪ್ರತಿಯೊಂದು ಭಾಷಾ ವಿಷಯಕ್ಕೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಕನಿಷ್ಠ 10 ಸಂಖ್ಯೆಗೆ ಮಾರ್ಪಾಡು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? | • ಭಾಷಾ ವಿಷಯಗಳಿಗೆ 40 ವಿದ್ಯಾರ್ಥಿಗಳ ಸಂಖ್ಯಾಬಲವನ್ನು 10 ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಮಾರ್ಪಡಿಸುವ ಸಂಬಂಧ ಪ್ರಸ್ತಾವನೆ ಸ್ವೀಕೃತವಾದಲ್ಲಿ, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. |

ಸಂಖ್ಯೆ: ಇಪಿ 65 ಡಿಜಿಡಬ್ಲ್ಯೂ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-ಎ-528(614)

ಜನವರಿ 1-1-2016 ರಿಂದ 31-12-2025ರವರೆಗೆ ಅನುದಾನಿತ ಪಿಯು ಕಾಲೇಜುಗಳಲ್ಲಿ
ಜಿಲ್ಲೆವಾರು ಖಾಲಿ ಹುದ್ದೆಗಳು

| ಕ್ರ.ಸಂ | ಜಿಲ್ಲೆ | ಒಟ್ಟು ಖಾಲಿ ಹುದ್ದೆಗಳು |
|---|---|---|
| 1 | BANGALORE NORTH | 114 |
| 2 | BANGALORE SOUTH | 138 |
| 3 | BANGALORE RURAL | 20 |
| 4 | RAMANAGARA | 35 |
| 5 | BELLARY | 46 |
| 6 | CHIKKODI | 51 |
| 7 | BELGAUM | 113 |
| 8 | BAGALKOT | 70 |
| 9 | BIJAPUR | 117 |
| 10 | BIDAR | 193 |
| 11 | DAVANGERE | 115 |
| 12 | CHITRADURGA | 103 |
| 13 | CHIKMANGLUR | 37 |
| 14 | GADAG | 104 |
| 15 | HAVERI | 101 |
| 16 | DHARWAD | 109 |
| 17 | KALBURGI | 86 |
| 18 | YADGIR | 12 |
| 19 | HASSAN | 64 |
| 20 | CHIKKABALLAPUR | 25 |
| 21 | KOLAR | 25 |
| 22 | CHAMRAJNAGAR. | 15 |
| 23 | MYSORE | 87 |
| 24 | MANDYA | 74 |
| 25 | UTTAR KANNADA | 50 |
| 26 | KOPPALA | 27 |
| 27 | RAICHUR | 27 |
| 28 | MANGLORE | 88 |
| 29 | UDUPI | 50 |
| 30 | SHIMOGA | 106 |
| 31 | TUMKUR | 332 |
| 32 | KODAGU | 18 |
| | Total | 2552 |

ಉಪನಿರ್ದೇಶಕರು (ಮೌ&ಅ)
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)